ಶ್ರೀ ಬಿ. ಎಂ. ಇದಿನಬ್ಬ.—ಈ ರೀತಿ ಕಡಿಮೆ ಸಂಬಳ ಬರುವ ನೌಕರರನ್ನು 400 ಮೈಲಿ ದೂರದ ಊರುಗಳಿಗೆ ಹಾಕಿದರೆ ಬಹಳ ಕಷ್ಟವಾಗುತ್ತದೆ ಎಂಬುದು ಸರ್ಕಾರದ ಗಮನಕ್ಕೆ ಬಂದರೂ ಕೂಡ ಈ ಕೇಸ್‌ನಲ್ಲಿ ಆ ರೀತಿ ಮಾಡಲು ಕಾರಣವೇನು ? ಇನ್ನು ಮುಂದೆಯಾದರೂ ಕೂಡ ಅದಷ್ಟು ಕಡಿಮೆ ದೂರದಲ್ಲಿರುವ ಜಾಗಗಳಿಗೆ ಪೋಸ್ಟ್‌ಮಾಡುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ.—ಮೂರು ಮತ್ತು ನಾಲ್ಕನೇ ದರ್ಜೆಯ ನೌಕರರನ್ನು ಅದಷ್ಟು ಅವರವರ ಜಿಲ್ಲೆಯಲ್ಲಿಯೇ ತಪ್ಪಿದರೆ ನೆರೆಯ ಜಿಲ್ಲೆಗಳಲ್ಲಿಯೇ ನೇಮಕ ಮಾಡಬೇಕೆಂಬ ನಿಯಮ ಇದೆ. ಆದರೆ ಇಲ್ಲಿ ಶ್ರೀಮತಿ ಜಲಜಾ ಎಂಬುವರನ್ನು ಟ್ರಾನ್ಸ್‌ಫರ್ ಮಾಡಿದ್ದು ಅಲ್ಲ, ಹೊಸದಾಗಿ ಅಪಾಯಿಂಟ್‌ಮೆಂಟ್ ಮಾಡಿದ್ದು. ಅವರು ಟ್ರೈನಿಂಗ್ ಮುಗಿಸಿದ 6 ತಿಂಗಳೊಳಗೆ ಅಪಾಯಿಂಟ್‌ಮೆಂಟ್ ಕೊಡಬೇಕೆಂದು ನಿಯಮ ಇದ್ದುದರಿಂದ ಅವರಿಗೆ ಅನುಕೂಲ ಮಾಡಿಕೊಡಲು ಬಿದರೆ ಜಿಲ್ಲೆಯಲ್ಲಿ ಅಪಾಯಿಂಟ್‌ಮೆಂಟ್ ಕೊಡಲಾಯಿತು.

ಶ್ರೀ ಎ. ರಾಮಚಂದ್ರ.—ಅಲ್ಪ ಸಂಬಳ ತೆಗೆದುಕೊಳ್ಳುವ ಈ ಬಡ ನೌಕರರನ್ನು 400 ಮೈಲಿಯಾಚೆಗೆ ಪೋಸ್ಟ್ ಮಾಡಿದರೆ ಅವರಿಗೆ ತೊಂದರೆಯಾಗುತ್ತದೆ ಎಂಬುದು ಸರ್ಕಾರದ ಅವಗಾಹನೆಗೆ ಬಂದಿಲ್ಲವೇ ?

ಶ್ರೀ ಜಿ. ಬಸವಣ್ಣಪ್ಪ.—ಮೂರು ಮತ್ತು ನಾಲ್ಕನೇ ದರ್ಜೆಯ ನೌಕರರನ್ನು ಆಯಾ ಜಿಲ್ಲೆಗಳಲ್ಲಿ ಅಥವಾ ಅಕ್ಕಪಕ್ಕದ ಜಿಲ್ಲೆಗಳಿಗೆ ನೇಮಕ ಮಾಡಬೇಕೆಂದು ಈಗಾಗಲೇ ಸರ್ಕಾರದ ಕಾನೂನು ಇದೆ. ಆದರೆ ಶ್ರೀಮತಿ ಜಲಜಾ ಅವರ ಕೇಸ್‌ನಲ್ಲಿ ಟ್ರಾನ್ಸ್‌ಫರ್ ಮಾಡಿದ್ದು ಅಲ್ಲ, ಹೊಸದಾಗಿ ಅಪಾಯಿಂಟ್‌ಮೆಂಟ್ ಮಾಡಿದ್ದು. ಮುಂದೆ ಜನರಲ್ ಟ್ರಾನ್ಸ್‌ಫರ್ ಮಾಡುವಾಗ ಇವರನ್ನು ಅವರ ಜಿಲ್ಲೆಯಲ್ಲಿ ಅಥವಾ ಅಕ್ಕಪಕ್ಕದ ಜಿಲ್ಲೆಯಲ್ಲಿಯೇ ಪೋಸ್ಟ್ ಮಾಡಲಾಗುತ್ತದೆ.

ಶ್ರೀ ಎಚ್. ಬಿ. ಹ್ಯಾಲನಯ್ಯ.—ಮೂರು ಮತ್ತು ನಾಲ್ಕನೇ ದರ್ಜೆ ನೌಕರರನ್ನು ಅವರ ಜಿಲ್ಲೆಯಲ್ಲಿ ಅಥವಾ ನೆರೆಯ ಜಿಲ್ಲೆಗಳಲ್ಲಿಯೇ ನೇಮಕ ಮಾಡಬೇಕೆಂದು ನಿಯಮ ಇದೆ. ಟ್ರೈನಿಂಗ್‌ಗಾಗಿ ನೇಮಕ ಮಾಡಿಕೊಳ್ಳುವಾಗ ಆಯಾ ಜಿಲ್ಲೆಯಲ್ಲಿ ಎಷ್ಟು ಪೋಸ್ಟ್‌ಗಳು ಖಾಲಿ ಇವೆ ಎಂಬುದನ್ನು ನೋಡಿಕೊಂಡು ನೇಮಕ ಮಾಡಿಕೊಳ್ಳುವುದಿಲ್ಲವೇ ! ಈ ರೀತಿ ಮಾಡಿದರೆ ದೂರದ ಜಾಗಗಳಿಗೆ ಪೋಸ್ಟ್‌ಮಾಡುವುದು ತಪ್ಪುವುದಿಲ್ಲವೇ ?

ಶ್ರೀ ಜಿ. ಬಸವಣ್ಣಪ್ಪ.—ಟ್ರೈನಿಂಗ್ ಕೊಡುವುದಕ್ಕೆ ಮುಂಚೆ ಆಯಾ ಜಿಲ್ಲೆಗಳಲ್ಲಿ ಎಷ್ಟೆಷ್ಟು ಪೋಸ್ಟ್‌ಗಳು ಖಾಲಿ ಇವೆ ಎಂಬುದನ್ನು ರೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ರಾಜ್ಯಮಟ್ಟದಲ್ಲಿ ಎಷ್ಟೆಷ್ಟು ಪೋಸ್ಟ್‌ಗಳು ಖಾಲಿ ಇವೆ ಎಂಬುದನ್ನು ರೆಕ್ಕಕ್ಕೆ ತೆಗೆದುಕೊಂಡು ಅದರ ಆಧಾರದ ಮೇರೆ ಟ್ರೈನಿಂಗ್ ಕೊಟ್ಟು, ಖಾಲಿ ಇರುವ ಕಡೆ ಪೋಸ್ಟ್‌ಮಾಡಲಾಗುತ್ತದೆ. ಶ್ರೀಮತಿ ಜಲಜಾ ಬಗ್ಗೆ ಜನರಲ್ ಟ್ರಾನ್ಸ್‌ಫರ್ ಸಮಯದಲ್ಲಿ ಸೂಕ್ತ ವ್ಯವಸ್ಥೆ ಮಾಡಲಾಗುತ್ತದೆ.

ಶ್ರೀ ಆರ್. ಮುನಿಸ್ವಾಮಯ್ಯ.—ಇದು ಟ್ರಾನ್ಸ್‌ಫರೋ ಅಥವಾ ಅಪಾಯಿಂಟ್‌ಮೆಂಟೋ, ಸ್ವಾಮಿ!

ಶ್ರೀ ಜಿ. ಬಸವಣ್ಣಪ್ಪ.—ಇದು ಅಪಾಯಿಂಟ್‌ಮೆಂಟ್.

Tractor Factory in Mysore State

197. **Sri T. V. KRISHNAPPA** (Channapatna).—

Will the Minister for Industries, Information and Publicity be pleased to state :—

(*a*) whether there is any proposal to start a Tractor Factory in the State ;

(*b*) if so, when?

Sri M. RAJASEKHARA MURTHY (Minister for Industries, Information and Publicity).—

(*a*) Yes.

(*b*) As soon as the collaboration proposals of the entrepreneurs are approved by the Government of India and the industry is registered in the Directorate General of Technical Development.

ಶ್ರೀ ಟಿ. ವಿ. ಕೃಷ್ಣಪ್ಪ.—ಟ್ರಾಕ್ಟರ್ ಕಾರ್ಖಾನೆಯನ್ನು ಎಲ್ಲಿ ಸ್ಥಾಪನೆ ಮಾಡುತ್ತೀರಾ ಮತ್ತು ಸರ್ಕಾರದವರೇ ನೇರವಾಗಿ ಸ್ಥಾಪನೆ ಮಾಡುತ್ತಾರಾ ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ರಾಜಶೇಖರಮೂರ್ತಿ.—ಖಾನಗೀ ಕ್ಷೇತ್ರದಲ್ಲಿ ಸ್ಥಾಪನೆಯಾಗುತ್ತದೆ. ಬೆಂಗಳೂರಿನ ಹತ್ತಿರವಿರುವ ವೈಟ್‌ಫೀಲ್ಡ್ ಹತ್ತಿರ ಸ್ಥಾಪನೆ ಮಾಡಲಾಗುತ್ತದೆ.

ಶ್ರೀ ಬಿ. ಪಿ. ಗಂಗಾಧರ.—ಸ್ವಾಮಿ, ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ಕೈಗಾರಿಕೋದ್ಯಮಿಗಳ ಸಹಕಾರ ಸಲಹೆಗಳನ್ನು ಭಾರತ ಸರ್ಕಾರದವರು ಅನುಮೋದಿಸಿದ್ದು ನದರಿ ಕೈಗಾರಿಕೆಯನ್ನು ತಾಂತ್ರಿಕ ಅಭಿವೃದ್ಧಿಯ ಮಹಾ ನಿರ್ವಾಹಕಾಲಯದಲ್ಲಿ ನೋಂದಣಿಗೊಳಿಸಿದ ಕೂಡಲೇ ಪ್ರಾರಂಭಿಸಲಾಗುವುದು ಎಂದು ಹೇಳಿದ್ದೀರಿ, ಇದು ನಮ್ಮ ದೇಶದ ದೌರ್ಭಾಗ್ಯ. ನಮ್ಮ ದೇಶದಲ್ಲಿ ಈಗ ಟ್ರಾಕ್ಟರುಗಳ ಅವಶ್ಯಕತೆ ನಮಗೆ ಗೊತ್ತಿದೆ. ಆದ್ದರಿಂದ ನಮಗೆ ಟ್ರಾಕ್ಟರುಗಳ ಫ್ಯಾಕ್ಟರಿ ಬೇಕು. ಇದಕ್ಕೆ ಅಪ್ರೂವಲ್ ದೊರೆಯದಿದ್ದರೆ ಆಗ ಏನು ಮಾಡುತ್ತೀರಾ ?

Sri M. RAJASEKHARA MURTHY.—The question is hypothetical.

ಶ್ರೀ ಎ. ಎಸ್. ಕೃಷ್ಣನ್.—ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ತಾವು ಕೊರ್ಯಾಬೊರೇಷನ್ ಪ್ರಪೋಜಲ್ಸ್ ಆಫ್ ದಿ ಎಂಟರ್‌ಪ್ರಿನರ್ಸ್ ಅಪ್ರೂವ್ಡ್ ಬೈ ದಿ ಗವರ್ನಮೆಂಟ್ ಆಫ್ ಇಂಡಿಯಾ ಎಂದು ಹೇಳಿದ್ದೀರಿ. ಆ ಎಂಟರ್‌ಪ್ರಿನರ್ಸ್ ಯಾರು ಇದರ ಬಗ್ಗೆ ವಿವರಗಳನ್ನು ಕೊಡುತ್ತೀರಾ, ಇದಕ್ಕೆ ಕ್ಯಾಪಿಟಲ್ ಇನ್‌ವೆಸ್ಟ್‌ಮೆಂಟ್ ಎಷ್ಟು, ಎಷ್ಟು ವರ್ಷಗಳವರೆಗೆ ಯಾವ ಆಧಾರದ ಮೇಲೆ ಕೊರ್ಯಾಬೊರೇಷನ್ ಮಾಡಲಾಗುತ್ತದೆ ಎಂಬುದನ್ನು ಹೇಳುತ್ತೀರಾ ?

Sri M. RAJASEKHARA MURTHY.—The capital investment is Rs. 12 crores; it is a Rs. 12 crore project, and it is with the technical and financial collaboration of an Austrian and Hungarain firm.

ಶ್ರೀ ಎಂ. ನಾಗಪ್ಪ.—ಈ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಸ್ಥಳವನ್ನು ನಿರ್ದಿಷ್ಟ ಮಾಡಿದ್ದೀರಾ ? ಆ ಬಗ್ಗೆ ಸ್ಥಳವನ್ನು ನಿರ್ದಿಷ್ಟ ಮಾಡದಿದ್ದರೆ ರಾಯಚೂರು ಜಿಲ್ಲೆಯಲ್ಲಿ ಇದನ್ನು ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

Sri M. RAJASEKHARA MURTHY.—I have already replied that the proposed location is at Whitefield near Bangalore.

ಶ್ರೀ ಎನ್. ಎ. ಚನ್ನೇಗೌಡ.—ಟ್ರಾಕ್ಟರು ಕಾರ್ಖಾನೆಯನ್ನು ಸ್ಥಾಪನೆ ಮಾಡುವುದರ ಜೊತೆಗೆ ಅದರ ಆಕ್ಸೆಸರೀಸ್ ಮತ್ತು ಪವರ್ ಟಿಲ್ಲರ್‌ಗಳನ್ನು ತಯಾರು ಮಾಡತಕ್ಕ ಯೋಜನೆಯನ್ನು ಸರ್ಕಾರದವರು ಇಟ್ಟುಕೊಂಡಿದ್ದೀರಾ ?

Sri M. RAJASEKHARA MURTHY.—No, Sir.

ಶ್ರೀ ಬಿ. ಪಿ. ಗಂಗಾಧರ್.—ಈಗ ನಮ್ಮ ರಾಜ್ಯಕ್ಕೆ ಎಷ್ಟು ಟ್ರಾಕ್ಟರುಗಳು ಬೇಕು ಎನ್ನುವ ಅಂಕಿಅಂಶಗಳು ತಮ್ಮಲ್ಲಿ ಇವೆಯೇ ?

Sri M. RAJASEKHARA MURTHY.—That is a varying number.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಎಷ್ಟು ದಿವಸಗಳಲ್ಲಿ ಇದು ಅಖೈರಾಗಿ ತೀರ್ಮಾನವಾಗಬಹುದು ಎಂದು ಸರ್ಕಾರದ ನಿರೀಕ್ಷೆ ಇದೆ? ಅದನ್ನು ಎಷ್ಟು ಬೇಗ ಮಾಡುವುದಕ್ಕೆ ಸಾಧ್ಯವಿದೆ ?

Sri M. RAJASEKHARA MURTHY.—The matter is pending before the Government of India and it is for them to take a decision. Meanwhile, the Austrians are arriving today and tomorrow and we are holding discussions with them.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಸ್ವಾಮಿ, ಈ ಟ್ರಾಕ್ಟರು ಕಾರ್ಖಾನೆಯನ್ನು ಸ್ಥಾಪನೆ ಮಾಡುವುದಕ್ಕೆ ಎಷ್ಟು ಹಣಬೇಕಾಗುತ್ತದೆ ? ಇದಕ್ಕೆ ಮೈಸೂರು ಸರ್ಕಾರದವರು ಏನಾದರೂ ಹಣ ಹಾಕಿದ್ದಾರೆಯೇ ? ಇದನ್ನು ಸರ್ಕಾರದ ಮುಖಾಂತರ ಸ್ಥಾಪನೆ ಮಾಡುವುದಕ್ಕೆ ಸಾಧ್ಯವಿದೆಯೇ ? ನಿಮಗೆ ಅದಕ್ಕೆ ಹಣವನ್ನು ಒದಗಿಸುವುದಕ್ಕೆ ಸಾಧ್ಯವಾಗದಿದ್ದರೆ ಕೇಂದ್ರಸರ್ಕಾರದವರಿಂದ ಅದಕ್ಕೆ ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ರಾಜಶೇಖರಮೂರ್ತಿ.—ಇದಕ್ಕೆ ಸರ್ಕಾರದವರು ಯಾವ ಯೋಜನೆ ಹಾಕಿ ಕೊಂಡಿಲ್ಲ. ಇದನ್ನು ಸ್ಥಾಪನೆ ಮಾಡುವುದಕ್ಕೆ ಖಾಸಗಿಯವರು ಮುಂದೆ ಬಂದರೆ ಅವರಿಗೆ ಭೂಮಿ, ನೀರು, ಲೈಟು ಇತ್ಯಾದಿ ಸೌಕರ್ಯಗಳನ್ನು ರಿಯಾಯಿತಿ ದರದಲ್ಲಿ ಕೊಡುತ್ತೇವೆ, ಇದಕ್ಕೆ ಹಣ ಸಹಾಯಬೇಕು ಎಂದು ಸರ್ಕಾರದವರನ್ನು ಈಗ ಯಾರೂ ಕೇಳಿಲ್ಲ.

Sri S. SIVAPPA.—It was stated that the proposal is before the Government of India, and the State Government will be having discussions with the Austrians tomorrow. What earthly purpose would be served by having discussions with Austrians when the power vests with the Central Government ? Does that delegation include a representative of the Central Government also ?

Sri M. RAJASEKHARA MURTHY.—They want to have some preliminary discussions about the details of the project. They expect that the Central Government would give the clearance.

ಶ್ರೀ ಎಚ್. ಬಿ. ಹ್ಯಾಲನಯ್ಯ.—ಈ ಟ್ರ್ಯಾಕ್ಟರು ಕಾರ್ಖಾನೆಯನ್ನು ಸ್ಥಾಪನೆ ಮಾಡುವುದಕ್ಕೆ ಕೇಂದ್ರಸರ್ಕಾರದವರ ಅನುಮತಿ ಸಿಕ್ಕಿದೆಯೇ ! ಮೈಸೂರು ಸಂಸ್ಥಾನದಲ್ಲಿ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಮುಂದೆ ಬರತಕ್ಕ ಕೈಗಾರಿಕೋದ್ಯಮಿಗಳಿಗೆ ಲೈಸೆನ್ಸ್ ಕೊಡುವುದನ್ನು ಕೇಂದ್ರ ಸರ್ಕಾರದವರು ವಿಳಂಬ ಮಾಡುತ್ತಿದ್ದಾರೆ. ಇದರಿಂದ ಕೈಗಾರಿಕೋದ್ಯಮಿಗಳು ವಾಪಸ್ಸು ಹೋಗುತ್ತಿದ್ದಾರೆ ಎಂದು ಈಗ್ಗೆ ಸ್ವಲ್ಪ ದಿವಸಗಳ ಹಿಂದೆ ಮಾನ್ಯ ಮುಖ್ಯಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಅದು ಇದಕ್ಕೆ ಅನ್ವಯಿಸುತ್ತದೆಯೇ ?

Sri M. RAJASEKHARA MURTHY.—I am not aware of the statement made in that regard. The collaboration agreement will have to be cleared by the Government of India because it involves foreign technology and foreign exchange.

Sri G. CHANDRAKANTH.—The Minister was pleased to say that the proposed industry would be located near the Whitefield. In view of the concentration of factories here and the decentralization policy, will the Government consider location of the proposed industry in the backward district of Bidar ?

Sri M. RAJASEKHARA MURTHY.—Before putting up an unit of this magnitude, the locational advantages will have to be taken into consideration.

Mr. SPEAKER.—Sri B. P. Gangadhar is permitted to put question No. 208.

Sale of Power Looms

208. Sri B. P. GANGADHAR (Tumkur) [(On behalf of SRI SIDDAIAH KASIMATH (Shirhatti)].—

Will the Minister for Development be pleased to state :—

(a) the number of powerlooms allotted through societies in the State (Districtwise);